ಗೊಲ್ಲರಹಟ್ಟಿಗಳು ನಿಮ್ಮ ಡೆಫನಿಷನ್‌ನಲ್ಲಿ ಬರುತ್ತವೆಯೆ ? ಇವರು ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ವರ್ಗದಲ್ಲಿ ಬರುತ್ತಾರೆಯೆ ? ಗೊಲ್ಲರಹಟ್ಟಿಯ ಜನ ಈ ಸವಲತ್ತಿಗೆ ಹೊರತಾಗಿದ್ದಾರೋ ಅಥವಾ ಒಳಗಾಗಿದ್ದಾರೋ ಅದಕ್ಕೆ ನಿರ್ದಿಷ್ಟವಾದ ಉತ್ತರ ಬೇಕಾಗುತ್ತದೆ. ಎರಡನೆಯದಾಗಿ ಈ ಸವಲತ್ತು ದುರುಪಯೋಗವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ? ತುಮಕೂರು ಜಿಲ್ಲೆಯ ಒಂದು ಊರಿನಲ್ಲಿ ಶ್ರೀರಾಮಚಂದ್ರನ ದೇವಾಲಯ ಕಟ್ಟುವುದಕ್ಕೆ ಉಪಯೋಗಿಸಲಾಗಿದೆ. ನನಗೆ ತಿಳಿದಮಟ್ಟಿಗೆ ದಲಿತ ಬಂಧುಗಳು ಶ್ರೀರಾಮಚಂದ್ರನ ದೇವಾಲಯ ಕಟ್ಟುವುದು ನನ್ನ ಗಮನಕ್ಕೆ ಬಂದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ:– ದಲಿತ ಜನಾಂಗದ ಕೇರಿಗಳಲ್ಲಿ ಸಾವಿರಾರು ಶ್ರೀರಾಮಚಂದ್ರನ ಮಂದಿರಗಳಿವೆ.

ಶ್ರೀ ಎಂ. ನಾರಾಯಣಸ್ವಾಮಿ:– ಹರಿಜನರೂ ಕೂಡ ಶ್ರೀರಾಮಚಂದ್ರನ ಭಕ್ತರು. ಶ್ರೀರಾಮಚಂದ್ರ ಬೇರೆಯವರ ಸ್ವತ್ತಲ್ಲ.

ಶ್ರೀ ವೈ.ಕೆ. ರಾಮಯ್ಯ:– ಆ ವಿಷಯದಲ್ಲಿ ಮಾತನಾಡುವುದಕ್ಕೆ ನಾನು ಮುಂದೆ ಬರುತ್ತಾ ಇದ್ದೇನೆ. ಶ್ರೀರಾಮಚಂದ್ರನ ದೇವಾಲಯವನ್ನು ಎಲ್ಲಿ ಕಟ್ಟಬೇಕು, ಮಾರಮ್ಮನ ದೇವಾಲಯವನ್ನು ಎಲ್ಲಿ ಕಟ್ಟಬೇಕೆನ್ನುವ ಬಗ್ಗೆ ಮಾತನಾಡೋಣ. ನನ್ನ ಪ್ರಶ್ನೆ ಇಷ್ಟೆ, ತುಮಕೂರು ಜಿಲ್ಲೆಯಲ್ಲಿ ಈ ಹಣ ದುರುಪಯೋಗವಾಗಿದೆ. ಯಾವ ವರ್ಗಕ್ಕೆ ಈ ಸವಲತ್ತು ಸಲ್ಲಬೇಕಾಗಿತ್ತು. ಆ ವರ್ಗದವರು ಬಿಟ್ಟು ಇದನ್ನು ಬೇರೆಯವರು ಉಪಯೋಗಿಸಿಕೊಂಡಿರುವುದು ನನ್ನ ಗಮನಕ್ಕೆ ಬಂದಿದೆ. ಗೊಲ್ಲರಹಟ್ಟಿಗಳನ್ನು ಪರಿಶಿಷ್ಟರ ಪಟ್ಟಿಯಲ್ಲಿ ಸೇರಿಸುತ್ತೀರಾ ? ಆ ಡೆಫನಿಷನ್‌ನಲ್ಲಿ ಸೇರುತ್ತದೆಯೇ ?

ಶ್ರೀ ಎಂ. ರಾಜಶೇಖರ ಮೂರ್ತಿ:– ತುಮಕೂರು ಜಿಲ್ಲೆಯೊಳಗೆ ಯಾವ ಹಣ ದುರುಪಯೋಗವಾಗಿರುವುದೂ ನನ್ನ ಗಮನಕ್ಕೆ ಬಂದಿಲ್ಲ. ಏನಾದರೂ ಇನ್‌ಸ್ಟೆನ್ಸ್ ಅವರಿಗೆ ಗೊತ್ತಿದ್ದರೆ, ದಯವಿಟ್ಟು ಅದನ್ನು ನನಗೆ ತಿಳಿಸಿದರೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ.

(ಗೊಂದಲ)

ತಿಪಟೂರು ತಾಲ್ಲೂಕು ವ್ಯವಸಾಯೋತ್ಪನ್ನ ಮಾರುಕಟ್ಟೆ ಸಹಕಾರ ಸಂಘ. ನಿ

104. ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ):– ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ತಿಪಟೂರು ತಾಲ್ಲೂಕು ವ್ಯವಸಾಯೋತ್ಪನ್ನ ಮಾರುಕಟ್ಟೆ ಸಹಕಾರ ಸಂಘ ನಿ. ಆಡಳಿತಾಧಿಕಾರಿಗಳ ನಿಯಂತ್ರಣದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಆ) ಹಾಗಿದ್ದಲ್ಲಿ ಅಲ್ಲಿಗೆ ಆಡಳಿತಾಧಿಕಾರಿಗಳು ಬರುವ ಮೊದಲು ಹಾಗೂ ನಂತರ ಆರ್ಥಿಕ ಸ್ಥಿತಿಯ ಬಗ್ಗೆ ಮಾಹಿತಿ ಒದಗಿಸುವುದು ?

ಇ) ಆಡಳಿತಾಧಿಕಾರಿಗಳು ಬಂದ ನಂತರ ನಷ್ಟ ಉಂಟಾಗಿದ್ದಲ್ಲಿ ಅಥವಾ ವಹಿವಾಟು ಕಡಿಮೆ ಆಗಿದ್ದಲ್ಲಿ ಸಂಬಂಧಪಟ್ಟವರ ಮೇಲೆ ಸೂಕ್ತ ಕ್ರಮ ಕೈಗೊಳ್ಳಲಾಗುವುದೇ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು):–

ಅ) ತಿಪಟೂರು ತಾಲ್ಲೂಕು ವ್ಯವಸಾಯೋತ್ಪನ್ನ ಮಾರುಕಟ್ಟೆ ಸಹಕಾರ ಸಂಘ ನಿ. ತಿಪಟೂರು

ಇದು ಪ್ರಸ್ತುತ ಆಡಳಿತಾಧಿಕಾರಿಗಳ ನಿಯಂತ್ರಣದಲ್ಲಿರುವುದಿಲ್ಲ. ಈ ಸಂಘವು ದಿನಾಂಕ: 26–9–90 ರಿಂದ 11–7–92ರವರೆಗೆ ವಿಶೇಷಾಧಿಕಾರಿಗಳ ನಿಯಂತ್ರಣದಲ್ಲಿತ್ತು. ದಿನಾಂಕ:12–7–92ರಂದು ಚುನಾಯಿತ ಆಡಳಿತ ಮಂಡಳಿಗೆ ಅಧಿಕಾರ ವಹಿಸಿಕೊಟ್ಟಿರುತ್ತಾರೆ.

ಆ) ವಿವರಗಳನ್ನು ಅನುಬಂಧ 'ಅ' ಮತ್ತು 'ಆ'ಗಳಲ್ಲಿ ಲಗತ್ತಿಸಿದೆ.

ಇ) ವಿಶೇಷಾಧಿಕಾರಿಗಳು ಬಂದ ನಂತರ ಸಂಘದಲ್ಲಿ ನಷ್ಟ ಉಂಟಾಗಿರುವುದಿಲ್ಲ ಮತ್ತು ವಹಿವಾಟು ಕಡಿಮೆಯಾಗಿರುವುದಿಲ್ಲ. ಆದುದರಿಂದ ಕ್ರಮಕೈಗೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

ಅನುಬಂಧ – 'ಅ'

ಟಿ.ಎ.ಪಿ.ಸಿ.ಎಂ.ಎಸ್.ಸಿ. ತಿಪಟೂರು ಇದರ ವ್ಯಾಪಾರ ತಃಖ್ತೆಯ ವಿವರ

(ರೂ. ಲಕ್ಷಗಳಲ್ಲಿ)

ಕ್ರಮ ಸಂಖ್ಯೆ	ವಿವರಗಳು	ವಿಶೇಷಾಧಿಕಾರಿಗಳು ಬರುವ ಮೊದಲು	ವಿಶೇಷಾಧಿಕಾರಿಗಳು ಬಂದ ನಂತರ	
		1989–90	1990–91	1991–92
1.	ಮಾರಾಟದಿಂದ	92.06	162.88	178.38
2.	ಖರೀದಿ	97.73	134.19	163.73
3.	ವ್ಯಾಪಾರದ ಖರ್ಚುಗಳು (ಸಾಗಾಣಿಕೆ ಇತರೆ)	3.80	5.84	6.11
4.	ವ್ಯಾಪಾರದ ಲಾಭ	4.22	5.65	6.60
5.	ನಿವ್ವಳ ಲಾಭ	1.82	1.17	1.27

ಅನುಬಂಧ–'ಆ'

ತಿಪಟೂರು ಟಿ.ಎ.ಪಿ.ಸಿ.ಎಂ.ಎಸ್. ನಿ. ತಿಪಟೂರು 1990–91, 1991–92 ಮತ್ತು ದಿನಾಂಕ: 11–7–92ರವರೆಗಿನ ಆರ್ಥಿಕ ಪರಿಸ್ಥಿತಿಯ ಬಗ್ಗೆ ವಿವರಗಳ ತಃಖ್ತೆ

ಕ್ರಮ ಸಂಖ್ಯೆ	ವಿವರಗಳು	ವಿಶೇಷಾಧಿಕಾರಿಗಳು ಪ್ರಭಾರ ವಹಿಸಿಕೊಳ್ಳುವ ದಿನಾಂಕ: 28–6–90ಕ್ಕೆ ಇದ್ದಂತೆ ಆರ್ಥಿಕ ಪರಿಸ್ಥಿತಿ	ವಿಶೇಷಾಧಿಕಾರಿಗಳ ಅವಧಿಯಲ್ಲಿ ಇದ್ದ ಆರ್ಥಿಕ ಪರಿಸ್ಥಿತಿ 31–3–91ಕ್ಕೆ	31–3–92ಕ್ಕೆ	ವಿಶೇಷಾಧಿಕಾರಿಗಳು ಆಡಳಿತ ಮಂಡಳಿಗೆ ಪ್ರಭಾರ ವಹಿಸಿಕೊಡುವಾಗ ಇದ್ದ ಆರ್ಥಿಕ ಪರಿಸ್ಥಿತಿ ದಿನಾಂಕ: 12–7–92ಕ್ಕೆ
1	2	3	4	5	6
I.	ಜವಾಬ್ದಾರಿ ವಿವರ				(ರೂ. ಲಕ್ಷಗಳಲ್ಲಿ)
1.	ಪಾವತಿಯಾದ ಷೇರು ಬಂಡವಾಳ	6.09	6.07	6.01	6.54
2.	ಆಪದ್ಧನ	4.13	4.13	4.13	4.13
3.	ಇತರೆ ನಿಧಿಗಳು	10.28	10.53	10.53	10.53
4.	ಸವಕಳಿ ನಿಧಿ	4.63	4.69	4.69	4.49
5.	ಠೇವಣಾತಿಗಳು	7.07	2.30	2.13	1.72
6.	ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಗದು ಸಾಲ	13.08	16.29	12.01	11.01
7.	ಸರ್ಕಾರಿ ಸಾಲ ಕೊಡಬೇಕಾಗಿರುವುದು	1.17	1.03	0.48	0.48
8.	ಇತರೆ ಜವಾಬ್ದಾರಿಗಳು	10.74	13.03	14.46	15.67
9.	ಅವಕಾಶಗಳು (ಬಾಡಿಗೆ, ಆಡಿಟ್ ಫೀ, ಸಂಬಳ ಇತ್ಯಾದಿಗಳಿಗೆ)	2.27	2.17	0,70	0.70

1	2	3	4	5	6
II. ಆಸ್ತಿಗಳು					
1. ಬ್ಯಾಂಕ್ ಶಿಲ್ಕು		6.94	0.52	3.19	2.28
2. ಹೂಡಿಕೆಗಳು (ಠೇವಣಾತಿಗಳು)		3.84	4.16	4.38	4.38
3. ವ್ಯಾಪಾರ ಮುಂಗಡಗಳು		3.30	2.92	4.87	3.73
4. ದಾಸ್ತಾನು ಸಾಲ ಸದಸ್ಯರಿಂದ ವಸೂಲಾಗಬೇಕಾದದ್ದು		11.97	11.46	8.10	7.77
5. ವ್ಯಾಪಾರ ಭದ್ರತಾ ಠೇವಣಿ		0.37	0.42	0.43	0.43
6. ಕೊಬ್ಬರಿ ಸಾಲ ವರ್ತಕರಿಂದ ಬರಬೇಕಾದದ್ದು		18.45	12.34	12.26	15.78
7. ಸೆಂಡ್ರಿ ಡೆಟರ್ಸ್		2.11	3.85	2.05	1.50
8. ನೌಕರರುಗಳಿಂದ ವಸೂಲಾತಿ		0.90	1.12	0.08	0.78
9. ಆಸ್ತಿಗಳು		4.68	4.69	4.69	4.69

ಶ್ರೀ ಜೆ.ಸಿ. ಮಾಧುಸ್ವಾಮಿ:– ಮಾನ್ಯ ಖರ್ಗೆಯವರ ಬಗ್ಗೆ ನನಗೆ ಬಹಳ ಗೌರವ ಇದೆ. ಆದರೆ ಅವರು ಕೊಟ್ಟಿರುವ ಉತ್ತರದ ಬಗ್ಗೆ ಗೌರವ ಇಲ್ಲ. ಏಕೆಂದರೆ ನಾನೂ ಕೂಡ ಆ ಭಾಗದಿಂದ ಬರುವವನು. ಟಿ.ಎ.ಸಿ.ಎಂ.ಸಿ. ತಿಪಟೂರು ಇಲ್ಲಿ ಆಡಳಿತಾಧಿಕಾರಿ ಇದ್ದಾಗ ಅಷ್ಟೇನೂ ವ್ಯವಹಾರ ಮಾಡಿಲ್ಲ. ಕೊಬ್ಬರಿ ವಹಿವಾಟು ಅಂತೂ ಸಂಪೂರ್ಣವಾಗಿ ನಿಂತು ಹೋಗಿತ್ತು. ಎರಡನೇಯದು ಎರಡರಷ್ಟು ವ್ಯವಹಾರ ಮಾಡಿ ಕಡಿಮೆ ಲಾಭ ಸಂಪಾದನೆ ಮಾಡಿರುವುದನ್ನು, ಲಾಭ ಸಂಪಾದನೆ ಅಲ್ಲವೆಂದು ಉತ್ತರ ಕೊಡುತ್ತೀರಿ. ನಾನು ಮೂರನೆಯ ಪ್ರಶ್ನೆ ಕೇಳಿದ್ದೇನೆ, ವ್ಯವಹಾರ ಕಡಿಮೆಯಾಗಿದ್ದರೆ ಆಡಳಿತಾಧಿಕಾರಿ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಾ ? ಇದರ ಬದಲು ನಾನು ಇನ್ನೊಂದು ಪ್ರಶ್ನೆ ಕೇಳುತ್ತೇನೆ. ನಿಮಗೆ ಕೊಟ್ಟಿರುವ ಮಾಹಿತಿ ತಪ್ಪಾಗಿದ್ದರೆ ಕಡೇ ಪಕ್ಷ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:– ಈಗ ನನ್ನ ಹತ್ತಿರ ಇರತಕ್ಕಂಥ ಮಾಹಿತಿ ಪ್ರಕಾರ ಅದನ್ನು ತಮಗೂ ಕೂಡ ಕೊಟ್ಟಿದ್ದೇನೆ. ವ್ಯವಹಾರ ಜಾಸ್ತಿಯಾದರೂ ಕೂಡ ಲಾಭ ಕಡಿಮೆಯಾಗಿದೆ ಎಂದು ತಮಗೆ ಒದಗಿಸಿಕೊಟ್ಟಿದ್ದೇನೆ. ಮುಚ್ಚಿಡತಕ್ಕಂಥ ಪ್ರಶ್ನೆಯೇ ಇಲ್ಲ. ತಾವು ನೋಡಿರಬಹುದು. ಟರ್ನ್‌ಓವರ್ 1990–91ರಲ್ಲಿ 162 ಲಕ್ಷ ಮತ್ತು 1991–92ರಲ್ಲಿ 178 ಲಕ್ಷ ಇದೆ. ಆದರೆ ನಿವ್ವಳ ಲಾಭದಲ್ಲಿ 90–91ರಲ್ಲಿ 1.17 ಲಕ್ಷ ಮತ್ತು 91–92ರಲ್ಲಿ 1.27 ಲಕ್ಷ ಇದೆ. ಅದಕ್ಕೆ ಹಿಂದೆ ಎಂದರೆ ಎಲೆಕ್ಟೆಡ್ ಬಾಡಿ ಇದ್ದಾಗ 1.82 ಇದೆ. ಅಂದರೆ ಇದು ಜಾಸ್ತಿ ಕಡಿಮೆ ಆಗಿದೆಯೆಂದು ನಾನು ತಮಗೆ ಸ್ಪಷ್ಟವಾಗಿ ಬರೆದುಕೊಟ್ಟಿದ್ದೇನೆ. ಇದರಲ್ಲಿ ಮುಚ್ಚಿಡುವಂಥ ಪ್ರಶ್ನೆ ಬರುವುದಿಲ್ಲ. ಇದರಲ್ಲಿ ಏನಾದರೂ ತಪ್ಪಿದ್ದರೆ ಬೇಕಾದರೆ ಮತ್ತೆ ವೆರಿಫಿಕೇಶನ್ ಮಾಡಿಸುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ:– ಉತ್ತರ ಕೊಡಬೇಕಾದರೆ ಆ ಪ್ರಶ್ನೆ ಉದ್ಭವವಾಗುವುದಿಲ್ಲ. ಅಲ್ಲೇನೂ ಲಾಭ ಕಡಿಮೆಯಾಗಿಲ್ಲ ಎಂದು ತಾವು ಹೇಳಿದ್ದೀರಿ. ಅದಕ್ಕಾಗಿ ವಹಿವಾಟು ಕಡಿಮೆಯಾಗಿಲ್ಲ. ಆದ್ದರಿಂದ ಅವರ ಮೇಲೆ ಕ್ರಮ ಕೈಗೊಳ್ಳುವ ಪ್ರಶ್ನೆ ಉದ್ಭವವಾಗುವುದಿಲ್ಲ ಎಂದರೆ ನಾನು ತಮಗೆ ಸ್ಪಷ್ಟವಾಗಿ ಹೇಳುತ್ತೇನೆ. ಅಲ್ಲಿ ಆಡಳಿತಾಧಿಕಾರಿ ಇದ್ದ ಕಾಲದಲ್ಲಿ ಕೊಬ್ಬರಿ ವ್ಯಾಪಾರ ನಡೆದಿಲ್ಲ. ಏಕೆ

ನಡೆದಿಲ್ಲ ಎಂದರೆ ತಾವೇನಾದರೂ ಎನ್‌ಕ್ವೈರಿ ಮಾಡಿಸುತ್ತೀರಾ ? ಎನ್‌ಕ್ವೈರಿ ಮಾಡಿಸಿ ಕಡೆಯ ಪಕ್ಷ ಕ್ರಮ ತೆಗೆದುಕೊಳುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:– ಎನ್‌ಕ್ವೈರಿ ಮಾಡಿಸುತ್ತೇನೆ. ಇನ್ನೊಂದು ಅಂಶವನ್ನು ತಾವು ಗಮನಕ್ಕೆ ತೆಗೆದುಕೊಳ್ಳಬೇಕು. ಅಡ್ಮಿನಿಸ್ಟ್ರೇಟರ್‌ನ್ನು ಅಲ್ಲಿ ಹಾಕಿದಾಗ ಅವರ ಸ್ಯಾಲರಿ ಕೂಡ ಇದರೊಳಗೆ ಬರುತ್ತದೆ. ಎಲೆಕ್ಟೆಡ್ ಬಾಡಿ ಇದ್ದಾಗ ಟರ್ನ್‌ಓವರ್ ಕಡಿಮೆ ಇದ್ದು ಪ್ರಾಫಿಟ್ ಜಾಸ್ತಿ ಇತ್ತು. ಈಗ ಟರ್ನ್‌ಓವರ್ ಜಾಸ್ತಿ ಇದ್ದು ಪ್ರಾಫಿಟ್ ಕಡಿಮೆಯಾಗಿದೆ. ಇದಕ್ಕೆ ಏನು ಕಾರಣವೆಂದು ನಾನು ಕೂಡ ಅವರನ್ನು ಕೇಳಿದ್ದೆ. ಅವರು ಏನು ಹೇಳಿದರು ಎಂದರೆ, ಅಡ್ಮಿನಿಸ್ಟ್ರೇಟರ್ ಅವರ ಸಂಬಳ ಕೂಡ ಹೋಗುವುದರಿಂದ ಪ್ರಾಫಿಟ್ ಹೆಚ್ಚಿಗೆ ಆದರೂ ಕೂಡ ಇದು ಅಷ್ಟಕ್ಕೆ ಬಂದಿದೆ ಎಂದು. ಅದಕ್ಕೆ ತಾವು ಹೇಳಿದ್ದೀರಿ, ಕೊಬ್ಬರಿ ವ್ಯವಹಾರ ಮಾಡಿಲ್ಲ ಎಂಬ ವಾದ ನಿಮ್ಮದು. ಇದನ್ನು ನಾನು ಎನ್‌ಕ್ವೈರಿ ಮಾಡಿಸುತ್ತೇನೆ. ಒಂದು ವೇಳೆ ಯಾರಾದರೂ ತಪ್ಪಿತಸ್ಥರು ಇದ್ದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ:– ಅವರಿಗೆ ನೀವು ಮ್ಯಾಕ್ಸಿಮಮ್ ಸಂಬಳ ಕೊಟ್ಟರೂ 70 ಸಾವಿರ ಸಂಬಳ ಕೊಡಬಹುದು. 1 ಲಕ್ಷ 82 ಸಾವಿರದಲ್ಲಿ ಪ್ರಾಫಿಟ್‌ನಲ್ಲಿ 70 ಸಾವಿರ ಹೋದರೂ ಟರ್ನ್‌ಓವರ್‌ನಲ್ಲಿ ಇನ್ನೂ 1 ಲಕ್ಷ 20 ಸಾವಿರ ಉಳಿಯಬೇಕಾಗಿತ್ತು. ಡಬಲ್ ಆಗಿದೆ ಎಂದು ತಾವು ಹೇಳಿಕೆ ಕೊಟ್ಟಿದ್ದೀರಿ. ತಮ್ಮ ಹೇಳಿಕೆ ಪ್ರಕಾರ ಅದು 92 ಲಕ್ಷದಿಂದ 178 ಲಕ್ಷಕ್ಕೆ ಹೋಗಿದೆ. ನಾನು ತಮಗೆ ಸ್ಪಷ್ಟವಾಗಿ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಏನೆಂದರೆ, ಕೊಬ್ಬರಿ ವ್ಯಾಪಾರ ಭಾರಿ ಕಡಿಮೆಯಾಗಿದೆ ಅಥವಾ ನಿಂತೇಹೋಗಿದೆ ಅವರ ಕಾಲದಲ್ಲಿ. ಇದನ್ನು ಏನಾದರೂ ಎನ್‌ಕ್ವೈರಿ ಮಾಡಿಸಿ ನಮಗೆ ನ್ಯಾಯ ಒದಗಿಸಿಕೊಡುತ್ತೀರಾ ? ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:– ಎನ್‌ಕ್ವೈರಿ ಮಾಡಿಸುತ್ತೇನೆ.

ಶ್ರೀ ಟಿ.ಎಂ. ಮಂಜುನಾಥ್:– ನಾನು ಅಲ್ಲಿಯ ಎಂ.ಎಲ್.ಎ. ನನಗೆ ಅವಕಾಶ ಕೊಡಬೇಕು.

ಉಪಾಧ್ಯಕ್ಷಿಣಿಯವರು:– ಯಾರು ಪ್ರಶ್ನೆ ಕೇಳಿದ್ದಾರೆ, ಅವರಿಗೆ ಮಾತ್ರ ಅವಕಾಶ ಕೊಡುತ್ತಿದ್ದೇನೆ. ಏಕೆಂದರೆ ಸಮಯ ಇಲ್ಲ.

ಶ್ರೀ ಟಿ.ಎಂ. ಮಂಜುನಾಥ್:– ಬೇರೆಯವರಿಗೆ ಕೊಟ್ಟಿದ್ದೀರಿ. ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟ ವಿಷಯ ಇದು.

ಉಪಾಧ್ಯಕ್ಷಿಣಿಯವರು:– ನೀವು ಎದ್ದು ನಿಂತುಕೊಂಡಿರಲಿಲ್ಲ. ಆಯಿತು ಕೇಳಿಬಿಡಿ.

ಶ್ರೀ ಟಿ.ಎಂ. ಮಂಜುನಾಥ್:– ತಮ್ಮ ಸಹಕಾರ ಸಂಘದ ತತ್ವದಲ್ಲಿ ಕೊಬ್ಬರಿ ವ್ಯಾಪಾರ ಮಾಡಬೇಕೆಂದು ಇದೆಯೇ ಎಂದು ಪ್ರಮುಖವಾಗಿ ಕೇಳತಕ್ಕಂಥಾದ್ದು ಒಂದು. ಮತ್ತು ಈ ಅಡ್ಮಿನಿಸ್ಟ್ರೇಟರ್ ಬರುವುದಕ್ಕೆ ಮುಂಚೆ ಏನು ಆಡಳಿತ ಅಲ್ಲಿತ್ತು, ಅವರು ಕಾನೂನಿಗೆ ವಿರುದ್ಧವಾಗಿ ಕೆಲವು ವರ್ತಕರಿಗೆ, 24 ಗಂಟೆಯೊಳಗೆ ತೆಗೆದಂಥ ಹಣ ಕೊಡಬೇಕು ಎಂದು ಕಾನೂನು ಎ.ಪಿ.ಎಂ.ಸಿ.ಯೊಳಗೆ ಇದ್ದರೂ ಕೂಡ, ವರ್ಷಾನುಗಟ್ಟಲೆ ಕೊಟ್ಟ ಹಣವನ್ನು ಬಿಟ್ಟಿದ್ದಾರೆ. ಹಿಂದೆ ನಡೆಸಿದಂಥ ಸಂಘ ಏನಿದೆ, ಇದೇ ಸೊಸೈಟಿಯವರು ಇವತ್ತು ಲಕ್ಷಾಂತರ ರೂಪಾಯಿಗಳನ್ನು ಒಬ್ಬರೇ ವರ್ತಕರಿಗೆ ಕೊಟ್ಟು, ಇನ್ನೂ ಕೂಡ ಹಣ ವಸೂಲು ಮಾಡದೆ ಸಂಘಕ್ಕೆ ಲುಕ್ಸಾನು ಮಾಡಿದ್ದಾರೆ. ಇದು ತಮ್ಮ ಗಮನಕ್ಕೆ ಬಂದಿದೆಯೆ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:– ಈಗ ತಾವು ಹೊಸದಾಗಿ ಸುಮಾರು ಒಂದು ಲಕ್ಷ ರೂಪಾಯಿ ಅವ್ಯವಹಾರವಾಗಿದೆ, ಎಂದು ಒಂದು ಪ್ರಶ್ನೆ ಹಾಕಿದ್ದೀರಿ.

ಅಲ್ಲಿ ಕೊಬ್ಬರಿ ವ್ಯಾಪಾರ ಮಾಡಿಲ್ಲ, ಇನ್ನೂ ಹೆಚ್ಚಿನ ಸಂಪಾದನೆ ಮಾಡಬಹುದಿತ್ತು, ತಪ್ಪು ಮಾಡಿದ್ದಾರೆ, ಎನ್‌ಕ್ವೈರಿ ಮಾಡಿ ಎಂದು ಹೇಳಿದ್ದಾರೆ. ಇಬ್ಬರೂ ಪ್ರಶ್ನೆಯನ್ನು ಹಾಕಿದ್ದಾರೆ. ಈ ಎರಡು ಪ್ರಶ್ನೆಗಳ ವಿಚಾರವಾಗಿಯೂ ಎನ್‌ಕ್ವೈರಿ ಮಾಡಿಸುತ್ತೇನೆ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಉತ್ತರ

ಬಗರ್ ಹುಕುಂ ಸಾಗುವಳಿಯನ್ನು ಸಕ್ರಮೀಕರಿಸಲು ಅವಧಿ ಮೀರಿದ ನಂತರ ಬಂದ ಅರ್ಜಿಗಳ ಬಗ್ಗೆ

61. ಶ್ರೀ ಎಂ.ಸಿ. ವೀರಭದ್ರಯ್ಯ (ಕೊರಟಗೆರೆ):– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸಾಕಷ್ಟು ಮಂದಿ ರೈತರು ವಾಸ್ತವಿಕವಾಗಿ ಬಗರ್‌ಹುಕುಂ ಸಾಗುವಳಿ ಮಾಡುತ್ತಿದ್ದು, ಟಿ.ಟಿ. ಕಟ್ಟಿ ಸ್ವಾಧೀನ ಅನುಭವದಲ್ಲಿದ್ದು, ಅವಧಿ ಮೀರಿದ ನಂತರ ಜಮೀನು ಮಂಜೂರಾತಿಗಾಗಿ ಅರ್ಜಿಗಳನ್ನು ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ರಾಜ್ಯದಲ್ಲಿ ಅಂತಹ ಬಾಕಿ ಇರುವ ಪ್ರಕರಣಗಳ ಸಂಖ್ಯೆ ಎಷ್ಟು ?

ಇ) ಅವಧಿ ಮೀರಿದ ನಂತರ ಬಂದಿರುವ ಅರ್ಜಿಗಳನ್ನು ಸಕ್ರಮೀಕರಿಸಲು ತಾಲ್ಲೂಕು ಭೂ ಮಂಜೂರಾತಿ ಸಮಿತಿಯು ಕ್ರಮ ಕೈಗೊಳ್ಳಲು ಅವಕಾಶವಿದೆಯೇ ?

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು):–

ಅ) ಹೌದು. ಆದರೆ ವಾಸ್ತವಿಕವಾಗಿ ಸಾಗುವಳಿ ಮಾಡುವ ಬಗ್ಗೆ, ಸ್ವಾಧೀನ ಅನುಭವದಲ್ಲಿರುವ ಬಗ್ಗೆ ಹಾಗೂ ಟಿ.ಟಿ. ದಂಡ ಪಾವತಿ ಮಾಡಿರುವ ಬಗ್ಗೆ ಲಭ್ಯವಿರುವ ದಾಖಲೆಗಳೊಂದಿಗೆ ಪರಿಶೀಲಿಸಿದ ನಂತರವೇ ನಿಜಸ್ಥಿತಿಯನ್ನು ದೃಢೀಕರಿಸಬಹುದು.

ಆ) 28,723.

ಇ) ಇಲ್ಲ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ನೀಡಲಾದ ಉತ್ತರಗಳು

ಶ್ರೀ ಹಾರನಹಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ಸಚಿವರು):– ಮಾನ್ಯ ಉಪಾಧ್ಯಕ್ಷರೇ, ದಿನಾಂಕ: 31–12–92ರ ಲಿಖಿತ ಮೂಲಕ ಉತ್ತರಿಸುವ 4ನೇ ಪಟ್ಟಿಯಲ್ಲಿರುವ ಪ್ರಶ್ನೆಗಳ ಪೈಕಿ, ಪ್ರಶ್ನೆಗಳ ಸಂಖ್ಯೆ 42, 10, 62, 64, 65, 323, 351, 440, 860, 786, 905, 907 ಮತ್ತು 682 ಪ್ರಶ್ನೆಗಳನ್ನು ಹೊರತು ಪಡಿಸಿ, ಇನ್ನು ಉಳಿದ 26 ಚುಕ್ಕೆ ಗುರುತಿಲ್ಲದ ಪ್ರಶ್ನೆಗಳ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಮೈಸೂರು ಜಿಲ್ಲೆಯಲ್ಲಿ ಮಳೆಯಿಂದ ಕೆರೆಕುಂಟೆಗಳು

192. 449. ಕೆ.ಎಸ್. ಕಾಳಮರಿಗೌಡ (ಪಿರಿಯಾಪಟ್ಟಣ):– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?